ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ನಾಯನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 28.02.2014

ಈ ವಾರದ ಮುನ್ಸೂಚನೆ (ದಿನಾಂಕ 01-03-14 to 05.03.14 ವರೆಗೆ)

ನಿಯತಾಂಕಗಳು	01/03/14	02/03/14	03/03/14	04/03/14	05/03/14
ಮಳೆ (ಮಿ ಮಿ)	0	4	5	4	5
ಗರಿಷ್ಠ ಉಷ್ಣಾಂಶ(ಡಿ.ಸೆ.)	32	31	30	30	30
ಕನಿಷ್ಠ ಉಷ್ಣಾಂಶ (ಡಿ.ಸೆ.)	18	19	19	18	18
ಮೋಡ (ಪ್ರಮಾಣ)	3	3	2	3	2
ಅರ್ದ್ರತೆ ೭.೨೦ ಬೆ (ಶೇ)	77	82	87	90	86
ಅರ್ದ್ರತೆ ೨.೨೦ ಮ (ಶೇ)	32	39	41	42	39
ಗಾಳಿಯ ವೇಗ (ಕಿ.ಮಿ/ಗಂಟೆಗೆ)	4	6	7	6	5
ಗಾಳಿಯ ದಿಕ್ಕು (ಡಿಗ್ರಿ)	230	180	150	160	130

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ದಿನಗಳಲ್ಲಿ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಬಿಸಿಲಿನ ತಾಪಮಾನ ಮುಂದುವರೆಯಲಿದ್ದು. ಮ್ಯಧ್ಯಾಹ್ನದ ನಂತರ ಮೋಡ ಕವಿದ ವಾತಾರಣ ಉಂಟಾಗಲಿದೆ. ಹಾಗೂ ಕೆಲವು ಕಡೆ ಚ್ಚದುರಿದಂತೆ ಮಳೆಯಾಗುವ ಸಂಭವವಿದೆ. ದಿನದ ಗರಿಷ್ಠ ಉಷ್ಣಾಂಶವು 30.0-32.0^{o}C ಮತ್ತು ಕನಿಷ್ಠ 18-19^{o}C ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ 77-90% ಇದ್ದು, ಮಧ್ಯಾಹ್ನ 32-42% ಇರುವುದು ಮತ್ತು ಗಾಳಿಯು ಈಶಾನ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ 4-7 ಕಿ.ಮೀ. ವೇಗದಲ್ಲಿ ಶೀತಗಾಳಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಪಶು ಇಲಾಖೆಯಿಂದ ದನಕರುಗಳಿಗೆ ಕಾಲುಬಾಯಿ ರೋಗದ ಲಸಿಕಾ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಅಗತ್ಯ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವುದು ಅತಿ ಅವಶ್ಯಕ.

ಮಾರ್ಚ್ ತಿಂಗಳಲ್ಲಿ ಬೆಳೆಯಬಹುದಾದ ತಳಿಗಳು:

ರಾಗಿ: ಇಂಡಾಫ್ಲ್–೫, ಜಿ.ಪಿ.ಯು–26, ಜಿ.ಪಿ.ಯು– 48. ಸೂರ್ಯಕಾಂತಿ: ಮಾರ್ಡೆನ್, ಕೆ.ಬಿ.ಎಸ್.ಹೆಚ್–1, ಕೆ.ಬಿ.ಎಸ್.ಹೆಚ್–41, ಕೆ.ಬಿ.ಎಸ್.ಹೆಚ್–42 ಕೆ.ಬಿ.ಎಸ್.ಹೆಚ್–44. ಅಲಸಂದೆ: ಸಿ–152. ಉದ್ದು: ಟಿ–9, ರಶ್ಮಿ. ಪಾಪ್ ಕಾರ್ನ್: ಅಂಬರ್, ಶಕ್ತಿಮಾನ್ ಮುಸುಕಿನ ಜೋಳ: ಗಂಗಾ–11, ನಿತ್ಯಶ್ರೀ.

ದ್ರಾಕ್ಷಿ ಹಾಗೂ ಇನ್ನಿತರ ತರಕಾರಿಗಳಲ್ಲಿ ಕಂದುಬರುವ ಬೂಜು ರೋಗ ಮತ್ತು ಆಲೂಗಡ್ಡೆ ಬೆಳೆಯಲ್ಲಿ ಕಂಡುಬರುವ ಕೊನೆ ಅಂಗಮಾರಿ ರೋಗಗಳ ನುಯಂತ್ರಣಕ್ಕೆ ರಿಡೊಮಿಲ್/**Ridomil** (2 ಗ್ರಾಂ/ಪ್ರತಿ ಲೀಟರ್ ನೀರಿಗೆ) ಅಥವಾ ಮೆಲೊಡಿ ಡಿಯೊ/**Melody Duo** (3 ಮಿ.ಲೀ/ಪ್ರತಿ ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.

- ಗುಲಾಬಿ: ಕಪ್ಪು ಚುಕ್ಕೆ ರೋಗ: ಕಳೆಗಳನ್ನು ತೆಗೆದು ಹಾಕಿ ಹೊಲವನ್ನು ಸ್ವಚ್ಚವಾಗಿಡಿ. ಮೇಲಿಂದ ಮೇಲೆ ಹೆಚ್ಚು ನೀರು ಹಾಯಿಸಬೇಡಿ. ಸಾರಾನಕವನ್ನು ಶಿಫಾರಸ್ಸಿಗಿಂತ ಹೆಚ್ಚು ಬಳಸಬೇಡಿ. ರೋಗ ತೀವ್ರವಾಗಿದ್ದಲ್ಲಿ ಸ್ಕೋರ್/ಅವತಾರ್ (ಡೈಫೆನ್‌ಕೊನಜೋಲ್) ಅಥವಾ ಕವಚ್ (2 ಮಿ.ಲೀ/ಪ್ರತಿ ಲೀಟರ್ ನೀರಿಗೆ) ಅಥವಾ ಅನ್ನು ಸಿಂಪಡಿಸಿ.
- ಬೂದಿ ರೋಗ ಹರಡಲು ಇದು ಸೂಕ್ತ ಕಾಲವಾಗಿರುವುದರಿಂದ ಸಲ್ಫೆಕ್ಸ್ (ಗಂಧಕ) ಅನ್ನು ಸಿಂಪಡಿಸಲು ಸೂಚಿಸಲಾಗಿದೆ.
- ರಸ ಹೀರುವ ಕೀಟಗಳ ನಿಯಂತ್ರಣಕ್ಕೆ **Blaze**/ಬ್ಲೇಜ್ (1.5-2ಗ್ರಾಂ/ಪ್ರತಿ ಲೀಟರ್ ನೀರಿಗೆ) ಸಿಂಪಡಿಸಿ ಅಥವಾ ಬೇವಿನ ಬೀಜದ ಕಷಾಯ.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು